# ಸಕಲೇಶಪುರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವ ನ್ಯಾಯಾಲಯದಲ್ಲಿ

**ಸಿ.ಸಿ. ನಂ. 199/2022**

| | | |
|---|---|---|
| ಸಾಕ್ಷಿದಾರರ ಹೆಸರು | ಬಸವರಾಜ್ ಚಿಂಚೋಳಿ | **P.W-1** |
| ತಂದೆಯ / ಗಂಡನ ಹೆಸರು | ಸಿದ್ದರಾಮಪ್ಪ | **C.W-1** |
| ವಯಸ್ಸು | 33 ವರ್ಷ | |
| ಉದ್ಯೋಗ | ಪಿ ಎಸ್ ಐ , ಮಂಡ್ಯ ಸೈಬರ್ ಪೊಲೀಸ್ ಠಾಣೆ | |
| ವಾಸ ಸ್ಥಳ | ಮಂಡ್ಯ | ದಿನಾಂಕ 02-07-2025 |

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ**

ನಾನು ದಿನಾಂಕ 11-12-2020 ರಿಂದ 18-02-2022 ವರೆಗೂ ಸಕಲೇಶಪುರ ನಗರ ಠಾಣೆಯಲ್ಲಿ ಪಿ ಎಸ್ ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ 15-01-2022 ರಂದು ಬೆಳಗ್ಗೆ 8.30 ಗಂಟೆಗೆ ಠಾಣಾ ಕರ್ತವ್ಯದಲ್ಲಿರುವಾಗ ಕುಶಾಲನಗರ ಬಡಾವಣೆಯಲ್ಲಿ ಅಕ್ರಮವಾಗಿ ಗೋಮಾಂಸ ಮಾರಾಟ ಮಾಡುತ್ತಿದ್ದಾರೆ ಎಂದು ಮಾಹಿತಿ ಬಂದಿರುತ್ತದೆ. ನಂತರ ನಾನು ಚಾಸಾ 4 ಮತ್ತು 5 ಹಾಗೂ ಪಂಚರಾದ ಚಾಸಾ 2 ಮತ್ತು 3 ರವರೊಂದಿಗೆ ಸ್ಥಳಕ್ಕೆ ಭೇಟಿ ನೀಡಿರುತ್ತೇನೆ. ಸಮವಸ್ತ್ರದಲ್ಲಿದ್ದ ನಮ್ಮನ್ನು ನೋಡಿ ಸ್ಥಳದಲ್ಲಿದ್ದ ಸಾರ್ವಜನಿಕರು ಮತ್ತು 1 ಮತ್ತು 2ನೇ ಆರೋಪಿತರು ಓಡಿ ಹೋಗಿರುತ್ತಾರೆ, 3ನೇ ಆರೋಪಿಯನ್ನು ನಾವು ಸದರಿ ದಿನ ಹಿಡಿದಿರುತ್ತೇವೆ. 3ನೇ ಆರೋಪಿಯ ಬಳಿ ಸದರಿ ಮಾಂಸವನ್ನು ಮಾರಾಟ ಮಾಡಲು ಪರವಾನಗೆ ಇದೆಯೇ ಎಂದು ವಿಚಾರಿಸಿರುತ್ತೇನೆ. 3ನೇ ಆರೋಪಿಯು ಯಾವುದೇ ಪರವಾನಗೆ ಇಲ್ಲ ಎಂದು ತಿಳಿಸಿರುತ್ತಾರೆ. ನಂತರ ನಾನು ಸ್ಥಳ ಮಹಜರನ್ನು ಚಾಸಾ 2 ಮತ್ತು 3 ರವರ ಸಮಕ್ಷಮ 1ನೇ ಆರೋಪಿಗೆ ಸೇರಿದ ಮನೆಯಲ್ಲಿ ಜರುಗಿಸಿರುತ್ತೇನೆ. ಸದರಿ ಮನೆಯು 1ನೇ ಆರೋಪಿಯ ತಾಯಿಯ

ಹೆಸರಿನಲ್ಲಿ ಇರುತ್ತದೆ. ನಂತರ ಪಂಚರ ಸಮಕ್ಷಮ 40 ಕೆ ಜಿ ಯಷ್ಟು ಗೋಮಾಂಸವನ್ನು ಅಮಾನತ್ತುಪಡಿಸಿಕೊಂಡಿರುತ್ತೇನೆ. ಸದರಿ ಗೋಮಾಂಸದ ಮೌಲ್ಯ 8000/- ರೂಪಾಯಿ ಆಗಿರುತ್ತದೆ. ಬೆಳಗೆ 9.00 ಗಂಟೆಯಿಂದ 10.00 ರವರೆಗೆ ಮಹಜರ್ ಮಾಡಿರುತ್ತೇನೆ. ನಂತರ ಸ್ವ ವರದಿ ತಯಾರಿಸಿ ಠಾಣಾ ಎಸ್ ಹೆಚ್ ಒ ಆಗಿದ್ದ ಚಾಸಾ 10 ರವರಿಗೆ ಪ್ರಕರಣ ದಾಖಲಿಸುವಂತೆ ಆರೋಪಿಯನ್ನು ಮತ್ತು ವರದಿಯನ್ನು ಮತ್ತು ಗೋಮಾಂಸವನ್ನು ಹಸ್ತಾಂತರ ಮಾಡಿರುತ್ತೇನೆ. 1 ಮತ್ತು 3ನೇ ಆರೋಪಿತರನ್ನು ಈ ದಿನ ನ್ಯಾಯಾಲಯದಲ್ಲಿ ನೋಡಿ ಗುರುತಿಸಿರುತ್ತೇನೆ.

ಸ್ವ ವರದಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ನಿಪಿ 1 ಎಂದು ಸಾಕ್ಷಿಯ ಸಹಿಯನ್ನು ನಿಪಿ 1(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಮಹಜರನ್ನು ನೋಡಿ ಗುರುತಿಸಿದ್ದು ಮಹಜರನ್ನು ನಿಪಿ 2 ಎಂದು, ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಎ ಪಿ ವಕೀಲರಿಂದ**

ನಾನು ದಿನಾಂಕ 15-01-2022 ರಂದು ಬೆಳಗ್ಗೆ 8.00 ಗಂಟೆಗೆ ಕರ್ತವ್ಯಕ್ಕೆ ಹಾಜರಾಗಿರುತ್ತೇನೆ. ನನಗೆ ಬೆಳಗ್ಗೆ 8.30 ಗಂಟೆಗೆ ಈ ಪ್ರಕರಣದ ಬಗ್ಗೆ ಮಾಹಿತಿ ಬಂದಿರುತ್ತದೆ. ನಾನು ಮಾಹಿತಿ ಬಂದ ನಂತರ ಠಾಣಾ ದಿನಚರಿಯಲ್ಲಿ ಈ ಬಗ್ಗೆ ನಮೂದು ಮಾಡಿರುವುದಿಲ್ಲ. ಚಾಸಾ 2 ಮತ್ತು 3 ರವರನ್ನು ಸಕಲೇಶಪುರ ಪೇಟೆಯಿಂದ ಠಾಣೆಗೆ ಬರಮಾಡಿಕೊಂಡಿರುತ್ತೇನೆ. ಬೆಳಗ್ಗೆ 8.40 ಗಂಟೆಗೆ ಚಾಸಾ 2 ಮತ್ತು 3 ರವರು ಠಾಣೆಗೆ ಬಂದಿರುತ್ತಾರೆ. ಚಾಸಾ 2 ಮತ್ತು 3 ರವರಿಗೆ ಮಹಜರ್ ಗೆ ಸಹಕರಿಸುವಂತೆ ನೋಟೀಸ್ ನೀಡಿರುತ್ತೇನೆ. ಪಂಚರಿಗೆ ನೋಟೀಸ್ ನೀಡಲು ಎರಡು ನಿಮಿಷ ತೆಗೆದುಕೊಂಡಿರುತ್ತೇನೆ. ನಾವು ಸದರಿ ದಿನ ಬಿಲಾಲ್ ಮಸೀದಿ ರಸ್ತೆಯಲ್ಲಿ ತಕ್ಷೀರು ಸ್ಥಳಕ್ಕೆ ಹೋಗಿರುತ್ತೇವೆ. ನಮ್ಮ ಠಾಣೆಯಿಂದ ಬಿಲಾಲ್ ಮಸೀದಿಗೆ 2 ಕಿ ಮಿ ಅಂತರವಿರುತ್ತದೆ. ಬಿಲಾಲ್ ಮಸೀದಿಯಿಂದ ಕೃತ್ಯ ಸ್ಥಳಕ್ಕೆ 300 ಮೀಟರ್ ಅಂತರವಿರುತ್ತದೆ. ಬಿಲಾಲ್ ಮಸೀದಿಯ ಪಕ್ಕ ಅನೇಕ ವಾಸದ ಮನೆಗಳು ಇದ್ದು, ಜನಸಂದಣಿ ಇರುತ್ತದೆ ಎಂದರೆ ಸರಿ.

ತಕ್ಷೀರು ಸ್ಥಳದ ಚಕ್ಕುಬಂದಿ ನನಗೆ ಈಗ ನೆನಪಿಲ್ಲ. ತಕ್ಷೀರು ಸ್ಥಳಕ್ಕೆ ನಾವು ಹೋದಾಗ ಸುಮಾರು 6-7 ಜನರು ಮನೆಯ ಹೊರಭಾಗದಲ್ಲಿ ಗೇಟ್ ಬಳಿ ಇದ್ದರು. ಮನೆಯ ಒಳಭಾಗದಲ್ಲಿ 1 ರಿಂದ 3ನೇ ಆರೋಪಿತರು ಇದ್ದರು. ಸದರಿ ಮನೆಯಲ್ಲಿ ಎಷ್ಟು ರೂಮುಗಳು ಇರುತ್ತವೆ ಎಂದು ನನಗೆ ನೆನಪಿಲ್ಲ. ಸದರಿ ಮನೆಯ ವಿಸ್ತೀರ್ಣ ನನಗೆ ಗೊತ್ತಿಲ್ಲ. ಸದರಿ ಮನೆಗೆ ಎಷ್ಟು ಬಾಗಿಲು ಇತ್ತು ಎಂದು ನನಗೆ ನೆನಪಿಲ್ಲ. ಸದರಿ ಮನೆಗೆ 3 ಅಡಿ ಅಗಲದ ಬಾಗಿಲು ಇತ್ತು. ಸದರಿ ಮನೆಯಲ್ಲಿ ಮಾಂಸವನ್ನು ಹೊರತುಪಡಿಸಿ ಬೇರೆ ಯಾವುದೇ ಕತ್ತಿ, ತೂಕದ ತಕ್ಕಡಿ, ತೂಕದ ಕಲ್ಲುಗಳು, ಮಾಂಸ ಕಡಿಯುವ ಮರದ ತುಂಡು ಇರಲಿಲ್ಲ. ಸ್ಥಳದಲ್ಲಿ 40 ಕೆ.ಜಿ ಯಷ್ಟು ತೂಕದ ಎರಡು ಮಾಂಸದ ತುಂಡುಗಳು ಇದ್ದವು. ಅಮಾನತ್ತುಪಡಿಸಿಕೊಂಡಿರುವ ಮಾಂಸಕ್ಕೆ ಪಂಚರ ಸಹಿ ಇರುವ ಚೀಟಿಯನ್ನು ಅಂಟಿಸಿರುವುದಿಲ್ಲ. ಸದರಿ ಮಾಂಸವನ್ನು ಯಾವುದೇ ಚೀಲದಲ್ಲಿ ಪ್ಯಾಕ್ ಮಾಡಿ ಠಾಣೆಗೆ ತಂದಿರುವುದಿಲ್ಲ. ತಕ್ಷೀರು ಸ್ಥಳಕ್ಕೆ ಪಶುವೈದ್ಯರನ್ನು ನಾನು ಕರೆಸಿಕೊಂಡಿರುವುದಿಲ್ಲ. ಸದರಿ ಮಾಂಸದಿಂದ ರಾಸಾಯನಿಕ ಪರೀಕ್ಷೆಗಾಗಿ ಮಾದರಿಯನ್ನು ತೆಗೆದಿರುತ್ತೆನೋ ಇಲ್ಲವೋ ಎಂದು ನನಗೆ ನೆನಪಿಲ್ಲ. ಮಾಂಸವನ್ನು ಅಮಾನತ್ತು ಪಡಿಸಿಕೊಳ್ಳುವ ಪೂರ್ವದಲ್ಲಿ ಠಾಣಾ ಎಸ್ ಹೆಚ್ ಒ ರವರಿಗೆ ಮಾಹಿತಿ ನೀಡಿ ಪ್ರಕರಣ ದಾಖಲು ಮಾಡಿರುವುದಿಲ್ಲ. ಆ ರೀತಿ ಪ್ರಕರಣ ದಾಖಲು ಮಾಡಲು ನನಗೆ ಯಾವುದೇ ಅಭ್ಯಂತರ ಇರಲಿಲ್ಲ. ಸ್ಥಳದಲ್ಲಿ ಸುಮಾರು 20 ಜನರು ಸಾರ್ವಜನಿಕರು ಸೇರಿದ್ದರು. ಮಹಜರ್ ಗೆ ಸ್ಥಳದಲ್ಲಿ ಸೇರಿದ ಸಾರ್ವಜನಿಕರ ಸಹಿಯನ್ನು ಪಡೆಯಲು ನನಗೆ ಯಾವುದೇ ಅಭ್ಯಂತರ ಇರಲಿಲ್ಲ.

ನಾನು ದಿನಾಂಕ 15-01-2022 ರಂದು ಕುಶಾಲನಗರ ಬಡಾವಣೆಯ 1ನೇ ಆರೋಪಿಯ ಮನೆಯ ಬಳಿ ಯಾವುದೇ ಮಹಜರ್ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಯಾವುದೇ ವಸ್ತುಗಳನ್ನು ಪಂಚರ ಸಮಕ್ಷಮ ಅಮಾನತ್ತು ಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ . ಆರೋಪಿತರಿಗೂ ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಇಲಾಖಾ ಅಂಕಿಅಂಶಗಳಿಗೋಸ್ಕರ ನಾನು ಸುಳ್ಳು ಪ್ರಕರಣ ದಾಖಲು ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ 2 ಮಹಜರ್ ನಲ್ಲಿ ಕ್ರೈ ನಂ. 8/2022 ಎಂದು ಠಾಣಾ

ಎಸ್ ಹೆಚ್ ಒ ರವರಿಂದ ಮಾಹಿತಿ ಪಡೆದು ನಮೂದು ಮಾಡಿರುತ್ತೇನೆ. ಪ್ರಥಮ ವರ್ತಮಾನ ವರದಿ ದಾಖಲು ಮಾಡಿದ ನಂತರ ಕ್ರೈಂ ನಂ. ನಮೂದು ಮಾಡುತ್ತೇವೆ ಎಂದರೆ ಸರಿ. ಆರೋಪಿತರ ವಿರುದ್ಧ ಸುಳ್ಳು ಪ್ರಕರಣ ದಾಖಲು ಮಾಡಿರುತ್ತೇನೆ ಎಂದರೆ ಸರಿಯಲ್ಲ. 1 ಮತ್ತು 3ನೇ ಆರೋಪಿತರಿಗೂ ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸಇ ಒ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ ಎಂ ಎಫ್ ಸಿ , ಸಕಲೇಶಪುರ